**<u>ದಿನಾಂಕಃ 26.06.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲುಃ **3 ನೇ ಪ್ರತಿವಾದಿ ಪರ** ಶ್ರೀ ಎಮ್ ಡಿ **ವಕೀಲರಿಂದಃ**</u>

ನಾನು 4 ನೇ ತರಗತಿವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಅಲ್ಪಸ್ವಲ್ಪ ಓದಲು ಮತ್ತು ಬರೆಯಲು ಬರುತ್ತದೆ. 2 ನೇ ವಾದಿ ನನ್ನ ಮಗಳು. 1 ರಿಂದ 3 ನೇ ಪ್ರತಿವಾದಿಗಳು ಸಹೋದರರು ಎಂದರೆ ಸರಿ. ಸದರಿ 1 ರಿಂದ 3 ನೇ ಪ್ರತಿವಾದಿಗಳ ತಂದೆಯ ಹೆಸರು ನಂಜನಾಯಕ ಎಂದರೆ ಸರಿ. 1 ರಿಂದ 3 ನೇ ಪ್ರತಿವಾದಿಗಳು ವಿಭಾಗವಾಗಿ ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಮತ್ತು ಪ್ರತಿವಾದಿಗಳು ಒಂದೇ ಗ್ರಾಮದವರು ಎಂದರೆ ಸರಿ. ನನಗೆ ಪ್ರತಿವಾದಿಗಳು ಮತ್ತು ಅವರ ತಂದೆಯು ಗೊತ್ತಿರುತ್ತಾರೆ. ಪ್ರತಿವಾದಿಗಳು ವಾಸಿಸುವ ಮನೆಯನ್ನು ನಾನು ನೋಡಿರುತ್ತೇನೆ. ಪ್ರತಿವಾದಿಗಳು ಪ್ರತ್ಯೇಕವಾಗಿ ಅವರ ಕುಟುಂಬದ ಸದಸ್ಯರೊಂದಿಗೆ ವಾಸಿಸುತ್ತಿದ್ದಾರೆ ಎಂದರೆ ಸರಿ. ಪ್ರತಿವಾದಿಗಳು ಎಷ್ಟು ವರ್ಷಗಳಿಂದ ಪ್ರತ್ಯೇಕವಾಗಿ ವಾಸವಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಗಳ ತಾತನ ಹೆಸರು ಬಿಳಿಗಿರಿ ನಾಯಕ ಎಂದರೆ ಸರಿ. ಬಿಳಿಗಿರಿ ನಾಯಕರಿಗೆ 3 ಜನ ಗಂಡು ಮಕ್ಕಳು, ಅವರೆಂದರೆ ರಂಗಯ್ಯ, ವೆಂಕಟಯ್ಯ, ನಂಜನಾಯಕ ಎಂದರೆ ಸರಿ. ರಂಗಯ್ಯರವರು ಬಹಳ ಹಿಂದೆ ಮರಣ ಹೊಂದಿರುತ್ತಾರೆ ಎಂದರೆ ಸರಿ. ಅದೇ ರೀತಿ ನಂಜನಾಯಕ ಮತ್ತು ವೆಂಕಟಯ್ಯರವರು ಮರಣ ಹೊಂದಿರುತ್ತಾರೆ ಎಂದರೆ ಸರಿ.

ಈ ದಾವೆ ಸಲ್ಲಿಸುವ ಪೂರ್ವದಲ್ಲಿ ದಿನಾಂಕ 08.06.2010 ರಲ್ಲಿ ನಾನು ನನ್ನ ವಕೀಲರ ಮೂಲಕ 2 ಮತ್ತು 3 ನೇ ಪ್ರತಿವಾದಿಗಳಿಗೆ ತಿಳುವಳಿಕೆ ಪತ್ರ ನೀಡಿದ್ದೆನು ಎಂದರೆ ಸರಿ. ಸಾಕ್ಷಿದಾರರಿಗೆ ಸದರಿ ದಿನಾಂಕ 08.06.2010 ರ ತಿಳುವಳಿಕೆ ಪತ್ರವನ್ನು ತೋರಿಸಲಾಗಿ ಸಾಕ್ಷಿದಾರರು ನೋಡಿ ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ನಿಡಿ-1 ರಲ್ಲಿ ವೆಂಕಟಯ್ಯ ಬಿನ್ ನಂಜನಾಯಕರವರಿಗೆ ಸರ್ವೆ ನಂಬರ್ 2/3 ರಲ್ಲಿ ಪೂರ್ವ ಪಶ್ಚಿಮ 14 ½ ಗಜ, ಉತ್ತರ ದಕ್ಷಿಣ 30 ಗಜ ವಿಭಾಗದಲ್ಲಿ ಬಂದಿತ್ತು ಎಂದು ನಮೂದಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ 1 ನೇ ಅನುಸುಚಿ ಸ್ವತ್ತಿನ ಪೂರ್ವಕ್ಕೆ ಪ್ರತಿವಾದಿಗಳ ನಿವೇಶನ

ಮತ್ತು ಮನೆ ಎಂದು ನಮೂದಿಸಿದ್ದೇನೆ ಎಂದರೆ ಸರಿ. ಅದೇ ರೀತಿ ದಾವಾ 2 ನೇ ಅನುಸುಚಿ ಸ್ವತ್ತಿನ ಉತ್ತರಕ್ಕೆ ಪ್ರತಿವಾದಿಗಳ ಮನೆ ಎಂದು ನಮೂದಿಸಿದ್ದೇನೆ ಎಂದರೆ ಸರಿ. ನಾನು ದಾವೆ ಸಲ್ಲಿಸುವಾಗ ನಕ್ಷೆಯನ್ನು ಹಾಜರು ಪಡಿಸಿದ್ದೇನೆ ಎಂದರೆ ಸರಿ. ಸದರಿ ನಕ್ಷೆಯಲ್ಲಿ ದಾವಾ ಅನುಸೂಚಿ ಸ್ವತ್ತಿನ ಪೂರ್ವಕ್ಕೆ ಮತ್ತು ಉತ್ತರಕ್ಕೆ ಪ್ರತಿವಾದಿಗಳ ಮನೆ ಎಂದು ನಮೂದಿಸಿದ್ದೇವೆ ಎಂದರೆ ಸರಿ.

ದಾವಾ ಅನುಸೂಚಿ ಸ್ವತ್ತಿನ ಪೂರ್ವಕ್ಕೆ 3 ನೇ ಪ್ರತಿವಾದಿಯ ನಿವೇಶನ ಇದೆ ಎಂದರೆ ಸರಿಯಲ್ಲ. ಸದರಿ 3 ನೇ ಪ್ರತಿವಾದಿಯ ನಿವೇಶನದ ಪೂರ್ವಕ್ಕೆ 2 ನೇ ಪ್ರತಿವಾದಿಯ ನಿವೇಶನ ಇದೆ ಎಂದರೆ ಸರಿಯಲ್ಲ. ಸದರಿ 2 ನೇ ಪ್ರತಿವಾದಿಯ ನಿವೇಶನದ ಪೂರ್ವಕ್ಕೆ 1 ನೇ ಪ್ರತಿವಾದಿಯ ನಿವೇಶನ ಇದೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತಿನ ಪೂರ್ವಕ್ಕೆ ಇರುವ ನಿವೇಶನಗಳು ಪ್ರತಿವಾದಿಗಳ ಹೆಸರಿಗೆ ಖಾತೆ ಆಗಿವೆ ಎಂದರೆ ಸರಿಯಲ್ಲ. ಸದರಿ ದಾವಾ ಅನುಸೂಚಿ ಸ್ವತ್ತಿನ ಪೂರ್ವ ಭಾಗದ ಆಸ್ತಿಯನ್ನು ಪ್ರತಿವಾದಿಗಳು ದಿನಾಂಕ 15.09.1998 ರ ವಿಭಾಗದಂತೆ ಭಾಗ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಭಾಗದಂತೆ ಪ್ರತಿವಾದಿಗಳು ತಲಾ ಪೂರ್ವ ಪಶ್ಚಿಮ 31 ¼ ಅಡಿ, ಉತ್ತರ ದಕ್ಷಿಣ 102 ಅಡಿಗೆ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರದಂತೆ 1 ನೇ ಪ್ರತಿವಾದಿಗೆ ಬಂದ ಪೂರ್ವ ಪಶ್ಚಿಮ 31 ¼ ಅಡಿ, ಉತ್ತರ ದಕ್ಷಿಣ 102 ಅಡಿ ನಿವೇಶನದಲ್ಲಿ ರಾಜೀವ್ ಗಾಂಧಿ ವಸತಿ ಯೋಜನೆಯ ಅಡಿಯಲ್ಲಿ ಹಣವನ್ನು ಪಡೆದು ಆರ್ ಸಿ ಸಿ ಮನೆ ನಿರ್ಮಿಸಿಕೊಂಡಿದ್ದಾರೆ ಎಂದರೆ ಸಾಕ್ಷಿದಾರರು ಮನೆ ಇದೆ, ಆದರೆ ಯಾವ ಯೋಜನೆಯ ಅಡಿಯಲ್ಲಿ ಮನೆ ಕಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ 1 ನೇ ಪ್ರತಿವಾದಿಯು ಸದರಿ ತಮ್ಮ ನಿವೇಶನದಲ್ಲಿ ಉತ್ತರ ದಿಕ್ಕಿಗೆ ಮನೆ ನಿರ್ಮಿಸಿಕೊಂಡು ದಕ್ಷಿಣಕ್ಕೆ ಖಾಲಿ ಜಾಗ ಬಿಟ್ಟುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ 1 ನೇ ಪ್ರತಿವಾದಿಯ ಮನೆಯ ಪಶ್ಚಿಮಕ್ಕೆ 2 ನೇ ಪ್ರತಿವಾದಿಯು ದನಗಳನ್ನು ಕಟ್ಟಿಹಾಕಲು ಒಂದು ಗುಡಿಸಲು ಹಾಕಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿದಾರರಿಗೆ ಎರಡು ಭಾವ ಚಿತ್ರಗಳನ್ನು ತೋರಿಸಲಾಗಿ ಸಾಕ್ಷಿದಾರರು ಅವುಗಳನ್ನು ನೋಡಿ ಒಪ್ಪಿ ಕೊಂಡಿದ್ದರಿಂದ ಅವುಗಳನ್ನು ನಿಡಿ-2 ಮತ್ತು 3 ಎಂದು ಗುರುತಿಸಲಾಯಿತು. ನಿಡಿ-2 ಮತ್ತು 3 ರ

ತಳಹದಿಯ ಬಲಭಾಗಕ್ಕೆ ಇರುವ ಖಾಲಿ ಜಾಗವು 3 ನೇ ಪ್ರತಿವಾದಿಗೆ ಸೇರಿದ್ದು ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು, ಸದರಿ ಖಾಲಿ ಜಾಗವು ನನಗೆ ಸೇರಿದ್ದು ಎಂದು ನುಡಿಯುತ್ತಾರೆ. ಸದರಿ ಖಾಲಿ ಜಾಗವು ನಮಗೆ ಸೇರಿದ್ದು ಎಂದು ದಾಖಲಾತಿಯನ್ನು ಹಾಜರು ಪಡಿಸಿರುತ್ತೇನೆ. ಗ್ರಾಮ ಪಂಚಾಯತಿಯಿಂದ ನಿವೇಶನವನ್ನು ಅಳತೆ ಮಾಡಲು ಬಂದಾಗ ಪ್ರತಿವಾದಿಗಳು ಗಲಾಟೆ ಮಾಡಿದ್ದರಿಂದ ಅಳತೆ ಮಾಡಿರುವುದಿಲ್ಲ. ಸದರಿ ಅಳತೆ ಮಾಡಿದ ಬಗ್ಗೆ ನಾನು ನನ್ನ ವಾದ ಪತ್ರದಲ್ಲಿ ನಮೂದಿಸಿರುವುದಿಲ್ಲ.

<u>ಮುಂದುವರಿದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ